doc-31
TP-2

Rega No M 1229 | 43rd Year | Sri 'Satyavadi' Mysore | 11—4—1959

ಪ್ರಮುಖ ವರ್ತಮಾನಗಳಿಗೆ
ಅಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ಸಂಸ್ಥೇವರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ರಾಷ್ಟ್ರದ ಗಡಿ ರಕ್ಷಿಸಲು ಭಾರತ ಸೈನ್ಯ ಸಿದ್ಧವಿದೆ

ನವದೆಹಲಿ 9— ಯಾರಾದರೂ ಭಾರತ ಗಡಿಯನ್ನು ಉಲ್ಲಂಘಿಸಿದರೆ ಭಾರತ ಸೈನ್ಯವು ಗಡಿಯನ್ನು ರಕ್ಷಿಸಲು ಸಿದ್ಧವಿದೆ ಎಂದು ಭಾರತ ರಕ್ಷಣಾ ಮಂತ್ರಿ ಶ್ರೀ ಕೃಷ್ಣಮೆನ್ನನ್ ಲೋಕಸಭೆಯಲ್ಲಿ ತಿಳಿಸಿದರು — ರಕ್ಷಣಾ ವ್ಯವಸ್ಥೆಯಲ್ಲಿ 25 ಕೋಟಿ ರೂಗಳನ್ನು ಇಳಿಸಿರುವುದು ತುಂಬಾ ಪರ್ಯಾಲೋಚನೆಯಿಂದಲೇ ಮಾಡಲಾಗಿದೆಯೆಂದೂ ತಿಳಿಸಿದರು.

ಭಾರತ ವಿಮಾನವನ್ನು ಪಾಕಿಸ್ಥಾನವು ಹೊಡೆದುರುಳಿಸಿತು

ಕರಾಚಿ 10— 10— ರಾವಲ್ಪಿಂಡಿಗೆ 30 ಮೈಲಿ ದೂರದಲ್ಲಿ ಗುಜರಖಾನ್ ಹತ್ತಿರ ಒಂದು ಭಾರತ ಕಾನಬೆರ ಜಟ್ ವಿಮಾನವನ್ನು ಪಾಕಿಸ್ಥಾನವು ಈ ಬೆಳಿಗ್ಗೆ 7 ಗಂಟೆ ಹೊತ್ತಿನಲ್ಲಿ ಹೊಡೆದುರುಳಿಸಿತು — ಇದು ಅತಿಹೋರು ಕಡೆಯಿಂದ ಬರುತ್ತಿತ್ತೆಂದು ಪಾಕಿಸ್ತಾನ ರೇಡಿಯೋ ಹೇಳಿದೆ — ವಿಮಾನ ಇಳಿಸಲು ತುಂಬಾ ಎಚ್ಚರಿಕೆ ಕೊಡಲಾಯಿತೆಂದೂ, ಎಚ್ಚರಿಕೆಯನ್ನು ಗಮನಿಸದಿದ್ದುದರಿಂದ ಹೊಡೆದುರಳಿಸಲಾಯಿತೆಂದು ಅತಹೋರಿನ ವರದಿ — ಆದರಲ್ಲಿದ್ದ ಒಬ್ಬ ಒಬ್ಬ ನ್ಯಾವಿಗೇಟರು ಮತ್ತು ಪೈಲೆಟ್ಟು ಅಫೀಸರರಿಗೆ ಗುಂಡಿನೇಟು ತಗಲಿಗಾಯಗೊಂಡರೆಂದೂ, ತನಿಖೆಗಾಗಿ ರಾವಲಪಿಂಡಿಗೆ ಕಳಿಸಲಾಗಿದೆಯೆಂದೂ ವರದಿ ತಿಳಿಸುತ್ತದೆ.

ವಿಮಾನ ಹಾರಾಟಕ್ಕೆ ಅಪ್ಪಣೆ ಬೇಕು

ನವದೆಹಲಿ— ಉತ್ತರಪೂರ್ವ ಗಡಿ ಪ್ರಾಜನ್ಸಿ ಮತ್ತು ನಾಗಾಬೆಟ್ಟಗಳ ಟುಯೆನ್ಸಾಂಗ್ ಭಾಗದಲ್ಲೂ ಅಸ್ಸಾಂ ಗ್ರಾಮರ ಅಪ್ಪಣೆಯಿಲ್ಲದೆ ಅಲ್ಲಿ ವಿಮಾನಗಳು ಹಾರಾಡೂಡದೆಂಬ 1954 ರ ಅಜ್ಞೆಯನ್ನು ಭಾರತ ಸರಕಾರ ಮತ್ತೆ ಜಾರಿಗೆ ತಂದಿದೆ.

ಮೈಸೂರು 11— ಇಲ್ಲಿಯ ಮುಸ್ಲಿಮರು ಪ್ರಾರ್ಥನೆ ಮತ್ತು ಉಪವಾಸದ ತಿಂಗಳ ಮುಕ್ತಾಯವನ್ನು ನಿನ್ನೆ ವೈಭವವಾಗಿ ಆಚರಿಸಿದರು.

ಬೆಂಗಳೂರಿನಲ್ಲಿ ನಿನ್ನೆ ನಡೆದ ಸಾರ್ವಜನಿಕ ಸಭೆಯಲ್ಲಿ ಟಿಬೆಟ್ಟಿನಲ್ಲಿ ಚೈನ ಅತಿಕ್ರಮಣ ಖಂಡಿಸಲಾಯಿತು.

ಜಮ್ಮು - ಕಾಶ್ಮೀರ ಸರಕಾರವು ಕಳೆದ ಎರಡು ವರ್ಷಗಳಿಂದ ಕಣಿವೆ ಭೇಟಿಗಾಗಿ ಬರುವ ಪ್ರವಾಸಿಕರಿಗೆ ಹೆಚ್ಚೆಚ್ಚು ಸೌಕರ್ಯ ಒದಗಿಸುವುದಕ್ಕಾಗಿ 24 ಲಕ್ಷ ರೂಗಳನ್ನು ಖರ್ಚುಮಾಡಿದೆ.

ಪಾಕಿಸ್ಥಾನದ ಧನ್ಯವಾದ

ನವದೆಹಲಿ 10— ಮಾರ್ಚ್ 23 ರಂದು ಪಾಕಿಸ್ಥಾನ ದಿನಾಚರಣೆ ಸಂಬಂಧವಾಗಿ ಭಾರತದ ರಾಷ್ಟ್ರಪತಿಗಳು ಪಾಕಿಸ್ತಾನದ ಅಧ್ಯಕ್ಷರಿಗೆ ಕಳುಹಿಸಿದ್ದ ಶುಭಾಶಯುಗಳಿಗೆ ಪಾಕಿಸ್ಥಾನದ ಅಧ್ಯಕ್ಷರು ಧನ್ಯವಾದವನ್ನು ತಿಳಿಸಿ ಮರು ಸಂದೇಶವನ್ನು ಕಳುಹಿಸಿದ್ದಾರೆ.

ಕಡ್ಡಾಯ ಸೇವೆ

ನವದೆಹಲಿ 10— ವೈದ್ಯಕೀಯ ಪದವೀಧರರು ಪದವಿ ಪಡೆದ ತರುವಾಯ ಕಡೆಯಪಕ್ಷ ಎಂಡು ವರ್ಷ ಗ್ರಾಮಾಂತರ ಪ್ರದೇಶಗಳಲ್ಲಿ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎಂಬ ಸಲಹೆ ಸರ್ಕಾರದ ಪರಿತೀಲನೆಯಲ್ಲಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಉಚಿತ ರೇಡಿಯೋಸೆಟ್ಟುಗಳು

ನವದೆಹಲಿ 10— ಗ್ರಾಮಾಂತರ ಪ್ರದೇಶಗಳಿಗೆ ಪ್ರಾಗೂ ಸಂಘ ಸಂಸ್ಥೆಗಳಿಗೆ ಓದಿಸುವ ಸಲುವಾಗೆಂದು ಕೇಂದ್ರ ಸರಕಾರವು ಮದರಾಸು ಸರಕಾರಕ್ಕೆ 1015 ರೇಡಿಯೋಸೆಟ್ಟನ್ನು ಸಹಾಯಮಾಡಿದೆ.

ಸೋತಿದ್ದಕ್ಕೆ ದಂಡ

ರೋಂ 8— ರೋಂ ಟೀಮಿನೊಡನೆ ನೇಪಲ್ಸ್ ಟೀಂ ಫುಟ್‌ಬಾಲ್ ಪಂಥದಲ್ಲಿ ಅಡಿ 8 ಗೋಲುಗಳಿಂದ ಸೋತುಹೋದುದು ! ಇದಕ್ಕಾಗಿ ಟೀಮಿನ ಕಮಿಟಿ ಕೇಳ್ದ ದರ್ಜೆ ಆಟವಾಡಿ ಸೋತದ್ದಕ್ಕೆ ಆಟಗಾರರಿಗೆ ಅವಮಾನವಾದ ಅರ್ಧ ಸಂಬಳವನ್ನು ಜುರ್ಮಾನೆ ಹಾಕಿತು. ಇದು ಆಟಗಾರರಿಗೆ 28 ಪೌಂಡಿನಿಂದ 34 ಪೌಂಡುಗಳನ್ನು ಕಡಮೆಮಾಡಿಗುವುದು !

ಶಾಲಿವಾ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣಜೋಯಿಸರಂದ
ಶಾಲಿವಾಹನವಾ ಚಾತಿ ರೋಹಿಣಿ

ಟಿಳಕರ ಸ್ಮಾರಕ

ರಂಗೂನ್ 10 — ಲೋಕಮಾನ್ಯ ಟಿಳಕರು 1908 ರ ಸೆಪ್ಟಂಬರಿನಿಂದ 1914 1914 ರ ಜೂನ್ ವರೆಗೆ ಖೈದಿಯಾಗಿದ್ದ ಮಾಂಡಲೆ ಸೆರೆಮನೆಯಲ್ಲಿ 5000 ಸಾವಿರ ರೂಗಳ ವೆಚ್ಚದಲ್ಲಿ ಭಾರತ ಸರಕಾರವು ಮಾಂಡಲೆಯಲ್ಲಿರುವ ಭಾರತೀಯರು ನೆರವಿನೊಡನೆ ಒಂದು ಸ್ಮಾರಕ ಭವನವನ್ನು ನಿರ್ಮಿಸಿದೆ: ಅದನ್ನು ಬರ್ಮಾದಲ್ಲಿನ ಭಾರತ ರಾಯಭಾರಿಯು ಬರ್ಮಾ ಸರಕಾರಕ್ಕೆ ಒಪ್ಪಿಸಿದರು.

ಕಂಠಿಯವರಿಗೆ ಸತ್ಕಾರ

ಬಿಜಾಪುರ 8— ಸ್ಥಳೀಯ ಜಿಲ್ಲಾ ಕಾಂಗ್ರೆಸ್ಸು ಭವನದಲ್ಲಿ ಇಂಗ್ಲೆಂಡಿಗೆ ಪ್ರಯಾಣ ಮಾಡಲಿರುವ ಮೈ ಸೂರು ಶಾಸನಸಭಾಧ್ಯಕ್ಷ ಶ್ರೀ ಕಂಠಿಯವರಿಗೆ ಸತ್ಕಾರಮಾಡಲಾಯಿತು — ಶವರಿಗೆ ಈ ಪ್ರವಾಸಕ್ಕಾಗಿ ಸರಕಾರ 6000 ರೂಗಳನ್ನು ಕೊಟ್ಟಿದೆಯೆಂದೂ, ಅಲ್ಲಿಯ ಪ್ರಜಾಪ್ರಭುತ್ವ ಪಾರ್ಲಿಮೆಂಟರಿ ಪದ್ಧತಿ ನೋಡಿಕೊಂಡು ಇಲ್ಲಿ ಅನುಸರಿಸುವು ದಾಗಿಯೂ ಕಂಠಿಯವರು ನುಡಿದರು.

ಪಾನನಿರೋಧ

ಬೊಂಬಾಯಿ 7— ಪಾನನಿರೋಧವು ಸಾಮಾನ್ಯ ಜನರಿಗೆ ಲಾಭದಾಯಕವಾಗಿರುವುದೆಂದೂ ಈ ಕಾರ್ಯಕ್ಕೆ ಅವರ ಪೂರ್ಣ ಬೆಂಬಲವಿರುವುದೆಂದೂ ಪಾರ್ಲಿಮೆಂಟು ಸದಸ್ಯರೂ, ಕಾಂಗ್ರೆಸ್ ಕಾರ್ಯದರ್ಶಿಯವರೂ ಆದ ಶ್ರೀ ಸುಜೇತ ಕೃಪಾಲಿನಿ ಹೇಳಿರುವರು

ಇಂದಿರಾರವರ ಪ್ರವಾಸ

ಎರ್ನಾಕುಲಂ 10— ಈ ತಿಂಗಳ ಕಡೆಯಲ್ಲಿ ಕಾಂಗ್ರೆಸ್ಸು ಅಧ್ಯಕ್ಷೆಣಿ ಶ್ರೀ ಇಂದಿರಾ ಗಾಂಧಿ ಕೇರಳಕ್ಕೆ ಭೇಟಿ ಕೊಡುವ ನಿರೀಕ್ಷಣೆ ಇದೆ — ತಾ || 29 ಕ್ಕೆ ತಿರುವನಂತಪುರ ಪ್ರವಾಸ ಮುಗಿಸಿಕೊಂಡು ಇಲ್ಲಿಗೆ ಬರುವರು.

ಸತ್ಯಾಗ್ರಹಕ್ಕೆ

ನವದೆಹಲಿ 10— ಬೊಂ ಬಾತ್ ಯಿಂ-ಮೈಸೂರು ಗಡಿ ಸತ್ಯಾಗ್ರಹದಲ್ಲಿ ಮೇ ತಿಂಗಳ 3 ನೇ ಅಥವಾ ಕಡೇ ವಾರದಲ್ಲಿ ಪಾರ್ಲಿಮೆಂಟಿನ ಪ್ರಜಾ-ಸೋಷಲಿಸ್ಟ್ ಸದಸ್ಯ ಬಿ ಎ ನಾಥ್ ಪೈ ಭಾಗವಹಿಸುವರೆಂದು ತಿಳಿಯಬಂದಿದೆ.

ಜಮಖಾನೆಗಳ ನಿಯಾತ

ನವದೆಹಲಿ 10— 1958 ರ ಮೊದಲ ನೇ 11 ತಿಂಗಳ ಅವಧಿಯಲ್ಲಿ 4-25 ಕೋಟಿಗಳಿಗೂ ಹೆಚ್ಚು ಮೌಲ್ಯದ ಉಣ್ಣೆ ಜಮಖಾನೆಗಳು ವಿದೇಶಗಳಿಗೆ ನಿರ್ಯಾತವಾಗಿರುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು.

ಇಂಜಿನಿಯರಿಂಗ್ ಕಾಲೇಜಿಗೆ ಶಿಲಾನ್ಯಾಸ

ಅಲಹಾಬಾದು 8— ಜನತೆಯು ಹೆಚ್ಚು ಕೆಲಸ ಮಾಡಿ, ಉತ್ಪತ್ತಿ ಹೆಚ್ಚಿಸಿ ತನ್ಮೂಲಕ ದೇಶದ ಸಂಪತ್ತನ್ನು ಅಭಿವೃದ್ಧಿ ಪಡಿಸಬೇಕೆಂದು ಪಂ॥ ನೆಹರು ಕರೆಯಿತ್ತಿರುವರು.

ಆರ್ಥಿಕ ಅಭಿವೃದ್ಧಿ ಸಮಿತಿ

ವಾಷಿಂಗ್ಟನ್ 6— ಅಂತರರಾಷ್ಟ್ರೀಯ ಆರ್ಥಿಕ ಅಭಿವೃದ್ಧಿ ಸಮಿತಿ ಮುಂದಿನ ತಿಂಗಳು 'ಭಾರತ ಮತ್ತು ಅಮೇರಿಕ' ಎಂಬ ವಿಷಯ ಕುರಿತು ನೊದಲಬಾರಿಗೆ ಸಭೆ ಸೇರಿದಾಗ ಅದರಲ್ಲಿ ಕಾರ್ಮಿಕರು, ಕೈಗಾರಿಕೆ, ಬ್ಯಾಂಕಿಂಗ್, ಸಂಕಾರ ಮತ್ತು ತಿಕ್ಷಣ ಈ ವಿಷಯಗಳಲ್ಲಿ ತಜ್ಞರಾದ ಸುಮಾರು 500 ಮಂದಿ ಭಾಗವಹಿಸುವರು.

ಕಾಂಗ್ರೆಸಿಗರ ಸೋಲು

ನವದೆಹಲಿ 9—ಅರುಣ್ ಅಸಫ್ ಅಲಿ ಯವರು 2 ನೇ ಸಾರಿ ದೆಹಲಿ ಪೌರ ಸಭಾಧ್ಯಕ್ಷಣಿಯಾಗಿ ಚುನಾಯಿತರಾದರು ; ಜನಸಂಘ ಕಮ್ಯುನಿಸ್ಟು ಪಾರ್ಟಿ ಮತ್ತು ಸ್ವತಂತ್ರರು ಇವರಿಗೆ ಬೆಂಬಲ ವಿತ್ತಿದ್ದರು — ಇವರ ಪ್ರತಿಸ್ಪರ್ಧಿ ಕಾಂಗ್ರೆಸಿಗರು ಸೋಕುಜೋದರು.

ದಲ್ಯಾ ಲಾಮಾರು

ತೇಜಪುರ 10— ದಲ್ಯಾ ಲಾಮಾರವರು ಬೊಂಬಿಲಾ ತಲಪಿದರು — ಅನೇರಿಕಾದಿಂದ ಅವರ ಸಹೋದರಂತಾದ ಗಾವಾ ತೊಂಡೂಪರು ಅನೇರಿಕಾದಿಂದ ಒಂದರು — ಅವಮಾನ ಉಪಯೋಗಕ್ಕಾಗಿ ಕಲ್ಕತ್ತಾದಿಂದ ಒಂದು ವಿಮಾನ ಕಳುಹಿಸಲಾಗಿದೆ

— × —

ವಿಶ್ವಸಂಸ್ಥೆ, ನ್ಯೂಯಾರ್ಕ್ 6 — 1941 ರಲ್ಲಿ ಬಹುವಾಗಿ ಭಾಷಾಂತರಿಸಲಾದ 30 ಮಂದಿ ಪ್ರಸಿದ್ಧ ಗಾಂಧಿಯಲ್ಲಿ ರವೀಂದ್ರನಾಥ ಠಾಕೂರರೂ ಒಬ್ಬರು ಎಂಬುದಾಗಿ ಇತ್ತೀಚಿನ ಪ್ರಕಟವಾದ ಯುನೆಸ್ಕೋವಿನ ಭಾಷಾಂತರಗಳ ಸೂಚನೆಯು ಸಂಪುಟ ತಿಳಿಸಿದೆ — ಇದರಲ್ಲಿ 65 ರಾಷ್ಟ್ರಗಳ 200 ಭಾಷೆಗಳ 27987 ಭಾಷಾಂತರಿಸಿದ ಪುಸ್ತಕಗಳ ಪಟ್ಟಿಯಿದೆ

ನವದೆಹಲಿ 9—ಭಾರತದ ರಾಷ್ಟ್ರೀಯ ಉತ್ಪಾದನಾ ಪರಿಷತ್ತಿನ ನೊದಲನೆ ವಾರ್ಷಿಕ ಸಭೆಯು ಏಪ್ರಿಲ್ 11 ರಂದು ನವದೆಹಲಿಯಲ್ಲಿ ನಡೆಯುವುದು.



ಶ್ರೀ ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ

ಏಕೈಕ ಕನ್ನಡ ಪತ್ರಿಕೆ

ಪೋಷಕರು ರೂ 25, ಬೆಂಬಲಿಗರು ರೂ 10 (ಒಂದೇ ಸಾರಿ)

ಅಪೆರಾ— ಜಯಪ್ರದ 2 ನೇ ವಾರ

ಸಕಲರೂ ನೋಡಬೇಕಾದ ಮನೋನ್ನತ ಪೌರಾಣಿಕ ಚಿತ್ರ

ನತ್ತಿಗ ತುಲಸಿ ತೆಲುಗು

ಪಾತ್ರ— ಎಸ್ ವರಲಕ್ಷ್ಮಿ, ಕೃಷ್ಣಕುಮಾರಿ, ಅಮರನಾಥ್, ಗುಮ್ಮಡಿ

ಪ್ರತಿದಿನ 3 ಆಟಗಳು

ವುಡ್‌ಲಾಂಡ್ಸ್ ಜನಪ್ರಿಯ 2 ನೇ ವಾರ

ಯಲ್. ಬಿ ಫಿಲ್ಮ್ಸ್‌ರವರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್

ನೋತೀಲಾಲ್, ಶುಭಾ ಖೋಟೆ

ದಿಗ್ದರ್ಶನ : ಋಷಿಕೇಷ್ ಮುಖರ್ಜಿ

ಸಂಗೀತ : ಶಂಕರ್ ಜೈಕಿಶನ್

ಬಹು ದಿನಗಳಿಂದ ಎದುರುನೋಡುತ್ತಿದ್ದ

ಈ ಚಿತ್ರವನ್ನು ನೋಡಲು ಮರೆಯಬೇಡಿ

[ದಿನವಹಿ 3 ಪ್ರದರ್ಶನಗಳು]

SHAKTI SUDHA

A Superb Tonic

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
2 insertions and above	1-25
Contract above 100 inches	1-00
500	0-75

Column length 12½ inches ; width 2 inches; 4 columns to a page.

The decision of the management is final in all matters.

Manager "Satyavadi", Chamarajpuram, Mysore

Edited, Printed & Published by Dharma Prachara Nurata M S Krishna Rao, at the Satyavadi Press Chamarajapuram, Mysore